ಅ) ಮೋಟಾರು ವಾಹನ ಇಲಾಖೆಯಲ್ಲಿ ಮೋಟಾರು ವಾಹನ ಇನ್ಸ್‌ಪೆಕ್ಟರ್ ಹುದ್ದೆ ಮತ್ತು ತತ್ಸಮಾನದ ಇತರೆ ಹುದ್ದೆಗಳ ನಡುವೆ ತಾರತಮ್ಯ ವಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ;

ಆ) ಮೋಟಾರು ವಾಹನ ಇಲಾಖೆಯಲ್ಲಿ ಮೋಟಾರು ವಾಹನ ಇನ್ಸಪೆಕ್ಟರ್‌ರವರಿಗೆ ಮಾತ್ರ ಅನುಕೂಲವಾಗುವಂತಹ ಕಾಯಿದೆಯನ್ನು ಮಾಡಲು ಕಾರಣಗಳೇನು ? ಈ ರೀತಿ ಒಂದೇ ವರ್ಗಕ್ಕೆ ವಿಭಿನ್ನ ರೀತಿಯ ನಿಯಮ ಮಾಡಿ ಇದರಿಂದ ಹೆಚ್ಚಿನ ಅರ್ಹತೆ ಇರುವವರನ್ನು ಇಲಾಖೆಯಲ್ಲಿ ಕಡೆಗಾಣಿಸಿರುವುದು ಸರಕಾರದವರು ಗಮನಕ್ಕೆ ಬಂದಿಯೇ ;

ಇ) ಈ ಇಲಾಖೆಯಲ್ಲಿ ಕಾನೂನು ಪದವೀಧರರಾಗಿ ಹಾಗೂ ವಕೀಲರಾಗಿ ಅನುಭವ ಪಡೆದು ಕೆಲಸ ಮಾಡುತ್ತಿರುವ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರ್‌ರವರಿ ಯಾವ ಚರ್ಚೆ ಕೊಡಲಾಗಿದೆ. ಮತ್ತು ಇವರಿಗೆ ಇಲಾಖೆಯಲ್ಲಿ ಯಾವ ಹುದ್ದೆಗೆ ಮುಂಬಡ್ತಿಯ ಅವಕಾಶವನ್ನು ಕೊಡಲಾಗುವುದು.

ಈ) ಮೇಲ್ಕಂಡ ತಾರತಮ್ಯವನ್ನು ಸರಿಪಡಿಸಲಾಗುವುದೇ ?

ಶ್ರೀ ಎಂ ಪಿ. ಪ್ರಕಾಶ್. ಸಾರಿಗೆ ಮತ್ತು ವಸತಿ ಸಚಿವರು —

ಅ) ಮೋಟಾರು ವಾಹನ ಇಲಾಖೆಯಲ್ಲಿ ಎಲ್ಲಾ ವರ್ಗಗಳ ನೇಮಕಾತಿ ಮೋಟಾರು ವಾಹನ ಇಲಾಖೆಯ ಶ್ರೇಣಿ ಮತ್ತು ನೇಮಕಾತಿ ನಿಯಮಗಳು, 1976ರ ಪ್ರಕಾರವಾಗಿದೆ. ಈ ಹುದ್ದೆಗಳ ಕಾರ್ಯವನ್ನು ಅವಲಂಭಿಸಿದಂತೆ ವ್ಯತ್ಯಾಸ ಇದ್ದೇ ಇರುತ್ತದೆ. ಇದು ಶ್ರೇಣಿ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಸರಿಯಾಗಿದೆ.

ಆ) ಮೋಟಾರು ವಾಹನ ಇಲಾಖೆಯ ಶ್ರೇಣಿ ಮತ್ತು ನೇಮಕಾತಿ ನಿಯಮಗಳು ಎಲ್ಲಾ ವರ್ಗದ ವರ ಹಿತವನ್ನು ಗಮನದಲ್ಲಿಟ್ಟುಕೊಂಡು ರಚಿಸಲಾಗಿವೆ. ಯಾವ ವರ್ಗದವರ ಹಿತವನ್ನು ಕಡೆಗಾಣಿಸಿಲ್ಲ.

ಇ) ಮೋಟಾರು ವಾಹನ ಶ್ರೇಣಿ ಮತ್ತು ನೇಮಕಾತಿ ನಿಯಮಗಳು, 1976ರ ಪ್ರಕಾರ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರ್ ಅವರಿಗೆ ಗ್ರೂಪ್ "ಸಿ" ದರ್ಜೆ ಕೊಡಲಾಗಿದೆ ಇವರಿಗೆ ಮುಂಬಡ್ತಿ ಅಧೀಕ್ಷಕರು ಎಂದು ಕೊಡಲಾಗುತ್ತಿದೆ. ಈ ಹುದ್ದೆಯು ಕೂಡ ಗ್ರೂಪ್ "ಸಿ" ವಿಭಾಗಕ್ಕೆ ಸೇರಿದೆ.

ಈ) ಉಪ ಪ್ರಶ್ನೆ (ಅ) ಮತ್ತು (ಆ) ಗೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :—ಕರ್ನಾಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ಚಾಲಕ ಹಾಗೂ ನಿರ್ವಾಹಕರೂ ಅಮಾನತ್ತಿನಲ್ಲಿಟ್ಟ ಹಾಗೂ ವಜಾ ಆದ ಪ್ರಕಾರಣದ ಬಗ್ಗೆ

ಪ್ರ ಸಂಖ್ಯೆ 28 (64) ಶ್ರೀ ಜ್ಞಾನದೇವ ದೊಡ್ಡ ಮೇಟಿ (ರೋಣ) —ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ವಿಷಯಗಳನ್ನು ತಿಳಿಸುವರೆ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ 1983-84, 1984-85 ಹಾಗೂ 1985 ಮೊದಲನೆಯ ಸಾಲಿನಲ್ಲಿ ನಿರ್ವಾಹ ಹಾಗೂ ಚಾಲಕರನ್ನು ಅಮಾನತ್ತಿನಲ್ಲಿಟ್ಟ ಹಾಗೂ ವಜಾ ಮಾಡಿದ ಪ್ರಕರಣಗಳೆಷ್ಟು ? (ಪ್ರತಿಯೊಂದು ವಿಭಾಗೀಯ ವಿವರಗಳನ್ನೊದಗಿಸುವುದು ಪ್ರತ್ಯೇಕ)

ಆ) ಇವರಲ್ಲಿ ಪುನರ್ನೇಮಕಗೊಂಡವರ ಸಂಖ್ಯೆ ಎಷ್ಟು ? ಪ್ರತಿಯೊಂದು ವಿಭಾಗದ ಮಾಹಿತಿಯನ್ನೊದಗಿಸುವುದು)

ಇ) ಪುನರ್ನೇಮಕಗೊಳ್ಳುವಾಗ ಅಮಾನತ್ತಿನಲ್ಲಿಟ್ಟವರ ಹಾಗೂ ತೆಗೆದುಹಾಕಿದವರ ಬಗ್ಗೆ ಅನುಸರಿಸುವ ಕ್ರಮಗಳೇನು ?

ಶ್ರೀ ಎಂ. ಪಿ ಪ್ರಕಾಶ್ (ಸಾರಿಗೆ ಹಾಗೂ ವಸತಿ ಮಂತ್ರಿಗಳು).—

ಅಮಾನತ್ತು ಮತ್ತು ವಜಾ ಆದ ನೌಕರರುಗಳ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

ವರ್ಷ	ನಿರ್ವಾಹಕರು ಮತ್ತು ಚಾಲಕರು	
	ಅಮಾನತ್ತು	ವಜಾ
1983-84	761	357
1984-85	889	300
1985 (ಏಪ್ರಿಲ್ ಮಾಹೆ ಮಾತ್ರ)	75	24

ವಿಭಾಗೀಯ ವಿವರಗಳನ್ನು ಅನುಬಂಧ-ಆ ನಲ್ಲಿ ಕೊಡಲಾಗಿದೆ.

ಆ) ಪುನರ್ನೇಮಕಗೊಂಡ ನೌಕರರ ವಿವರವನ್ನು ಈ ಕೆಳಗೆ ಕೊಡಲಾಗಿದೆ.

ವರ್ಷ	ಪುನರ್ನೇಮಕಗೊಂಡ ನಿರ್ವಾಹಕರು ಮತ್ತು ಚಾಲಕರು
1983-84	89
1984-85	48
1985 (ಏಪ್ರಿಲ್ ಮಾಹೆ ಮಾತ್ರ)	3

ಪ್ರಾದೇಶಿಕ ವಿವರಗಳನ್ನು ಅನುಬಂಧ—ಆ ನಲ್ಲಿ ಕೊಡಲಾಗಿದೆ.

ಇ) ಶಿಸ್ತು ಪಾಲನೆಯ ನಡವಳಿಕೆಗಳ ಬಗ್ಗೆ, ದಂಡನೆ, ಮನವಿ, ದಂಡನೆಯ ಪುನರ್‌ಪರಿಶೀಲನೆ ಇತ್ಯಾದಿ ವಿಧಾನಗಳ ಬಗ್ಗೆ ರೀತಿನೀತಿಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಶಿಸ್ತು ಮತ್ತು ನಡತೆಯ ನಿಯಮಾವಳಿ 1971ರಲ್ಲಿ ನಿಗಧಿಪಡಿಸಲಾಗಿದೆ ಈ ರೀತಿನೀತಿಗಳನ್ನು ಚಾಚೂ ತಪ್ಪದೆ ಪಾಲಿಸಲಾಗುತ್ತಿದೆ.

ವಿಷಯ.—ಸಂಕೇಶ್ವರ ರಾಜ್ಯ ರಸ್ತೆ ಸಾರಿಗೆ ಬಸ್ ಡಿಪೋ

ಪ್ರ. ಸಂಖ್ಯೆ 29 (270) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಸಾರಿಗೆ ಹಾಗೂ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಸಂಕೇಶ್ವರ ರಾಜ್ಯ ರಸ್ತೆಸಾರಿಗೆ ಡಿಪೋ ಪ್ರಾರಂಭವಾಗಿ ಎಷ್ಟು ವರ್ಷಗಳಾಯಿತು ?

ಆ) ಸದರೀ ಡಿಪೋದಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು ?

ಇ) ಸದರೀ ಡಿಪೋ ಪ್ರಾರಂಭವಾಗಿನಿಂದಲೂ ಪ್ರತಿ ವರ್ಷ ನೀಡಿರುವ ಹೊಸ ವಾಹನಗಳ ಸಂಖ್ಯೆ ಎಷ್ಟು ?

ಈ) ಸದರೀ ಬಸ್ಸು ಡಿಪೋ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಡಿಪೋದ ಪ್ರತಿ ವರ್ಷದ ಉತ್ಪನ್ನ ಎಷ್ಟು ;

ಉ) ಪ್ರತಿ ದಿವಸ ಸಂಕೇಶ್ವರ ಡಿಪೋದಿಂದ ಸಾಗಾಣಿಕೆ ಮಾಡುವ ಪ್ರವಾಸಿಗರ ಸರಿ ಸಮಾರು ಸಂಖ್ಯೆ ಎಷ್ಟು ;

ಊ) 60ಕ್ಕೆ ಮೇಲ್ಪಟ್ಟು ಬಸ್ಸುಗಳನ್ನು ಸಂಕೇಶ್ವರ ಡಿಪೋಕ್ಕೆ ಕೊಡಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು ;

ಋ) ಅಪಘಾತಕ್ಕೊಳಗಾದ ಸದರೀ ಬಸ್ ಡಿಪೋದ ಬಸ್ಸುಗಳ ಸಂಖ್ಯೆ ಎಷ್ಟು ?

ಶ್ರೀ ಎಂ.ಪಿ. ಪ್ರಕಾಶ್, ಮಾನ್ಯ (ಸಾರಿಗೆ ಸಚಿವರು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸಂಕೇಶ್ವರ ಡಿಪೋ 1,3,50ರಲ್ಲಿ ಪ್ರಾರಂಭವಾಗಿದ್ದು, 35ವರ್ಷ ಪೂರ್ತಿಗೊಂಡಿದೆ, ದಿ ! 31-5-85ನೇ ಸರಣಿಯ ಪ್ರಕಾರ 49 ಬಸ್ಸುಗಳು ಇವೆ.

ಆ) 31-5-85ರ ಸರಣಿಯ ಪ್ರಕಾರ 49 ಬಸ್ಸುಗಳು ಇವೆ.

ಇ) 1957-58ರಿಂದ 1984ರ ವರೆವಿಗೆ 68 ಹೊಸ ವಾಹನಗಳನ್ನು ಈ ಡಿಪೋಗೆ ಕೊಡಲಾಗಿದೆ.

ಈ) ಪ್ರತಿ ವರ್ಷದ ಆದಾಯವನ್ನು ಅನುಬಂಧ-(ಆ) ನಲ್ಲಿ ಕೊಡಲಾಗಿದೆ.

ಉ) ಸುಮಾರು 24,000

ಊ) ಪ್ರಕಸ್ತದಲ್ಲಿ ಈ ಡಿಪೋನಲ್ಲಿ 49 ಬಸ್ಸುಗಳಿದ್ದು 39 ಷೆಡ್ಯೂಲ್‌ಗಳಲ್ಲಿ ಓಡಾಡುತ್ತಿರುತ್ತವೆ ಸಂಚಾರಿ ಬೇಡಿಕೆಯು ಇದ್ದಂತೆಲ್ಲಾ ಆಗಿಂದಾಗ್ಗೆ ಹೆಚ್ಚುವರಿ ಬಸ್ಸುಗಳನ್ನು ಕೊಡಲಾಗುತ್ತದೆ.

ಋ) 1982-83 – 6 ಬಸ್ಸುಗಳು
1983-84 – 2 ಬಸ್ಸುಗಳು
1984-85 – 7 ಬಸ್ಸುಗಳು
ಒಟ್ಟು 15 ಬಸ್ಸುಗಳು.